# ತೊತ್ತು ಕೆಲಸವ ಮಾಡೋ

ಎನ್. ಕೃಷ್ಣಸ್ವಾಮಿ

*ಸ್ವಾಮಿ ವಿವೇಕಾನಂದರ ಸೇವಾತತ್ತ್ವವೇ ಮೂರ್ತಿವೆತ್ತಂತಿದ್ದ ಸ್ವಾಮಿ ಕಲ್ಯಾಣಾನಂದ ಮತ್ತು ನಿಶ್ಚಯಾನಂದ ಇವರ ಸೇವಾಯೋಗದ ಒಂದು ಹೃದಯಸ್ಪರ್ಶಿ ಚಿತ್ರಣವನ್ನು ನೀಡಿರುವ ಪ್ರೊ. ಕೃಷ್ಣಸ್ವಾಮಿಯವರು ಬೆಂಗಳೂರಿನ ಸ್ವಾಮಿ ವಿವೇಕಾನಂದ ಎಜುಕೇಷನ್ ಸೊಸೈಟಿಯ ಕಾರ್ಯದರ್ಶಿಯಾಗಿರುವರು.*

ಬಸವಣ್ಣನವರು ತಮ್ಮ ಒಂದು ಪ್ರಸಿದ್ಧ ವಚನದಲ್ಲಿ ಹೀಗೆ ಹೇಳಿದ್ದಾರೆ:

ಹೊತ್ತಾರೆ ಎದ್ದು ಅಗ್ಗವಣಿ ಪುಷ್ಪಗಳ ತಂದು
ಹೊತ್ತುಹೋಗುವ ಮುನ್ನ ಪೂಜಿಸೋ ಲಿಂಗವ
ಹೊತ್ತು ಹೋದ ಬಳಿಕ ನಿನ್ನನ್ನಾರು ಬಲ್ಲರಯ್ಯ
ಹೊತ್ತುಹೋಗುವ ಮುನ್ನ ಮೃತ್ಯು ಒಯ್ಯುವ ಮುನ್ನ,
ತೊತ್ತು ಕೆಲಸವ ಮಾಡೋ ಕೂಡಲ ಸಂಗಮ ದೇವನ

ಭಕ್ತಿಮಾರ್ಗದಲ್ಲಿ ಈ ತೊತ್ತು ಕೆಲಸಕ್ಕೆ ಬಹಳ ಪ್ರಾಮುಖ್ಯ ಕೊಡಲಾಗಿದೆ. "ಹುವ್ವ ತರುವರ ಮನೆಗೆ ಹುಲ್ಲ ತರುವ" ಎಂಬ ದೇವರ ನಾಮದಲ್ಲಿ ಪುರಂದರ ದಾಸರು ಪುಂಡರೀಕಾಕ್ಷ ಕೃಷ್ಣನೇ "ತೊಂಡರಿಗೆ ತೊಂಡನಾಗಿ ಸಂಚರಿಸುತಿಹನು" ಎಂದು ಹೇಳುತ್ತಾರೆ.

ಸ್ವಾಮಿ ವಿವೇಕಾನಂದರ ಶಿಷ್ಯ, ಕಲ್ಯಾಣಾನಂದರ ಜೀವನವೆಲ್ಲ ಈ ತೊತ್ತು(ಸೇವೆ) ಕೆಲಸದಲ್ಲಿಯೇ ಕಳೆಯಿತು. ಅವರು ಈ ಕಾರ್ಯಕ್ಕಾಗಿ ತಮ್ಮನ್ನೇ ಅರ್ಪಿಸಿಕೊಂಡಿದ್ದರು. ೧೯೦೦ ರಲ್ಲಿ ಅವರಿಗೆ ಸಂನ್ಯಾಸ ಕೊಟ್ಟಾಗ "ಸರಿ. ಕಲ್ಯಾಣ್, ನನಗೆ ಗುರುದಕ್ಷಿಣೆಯಾಗಿ ಏನು ಕೊಡುತ್ತೀಯೆ?" ಎಂದು ಸ್ವಾಮೀಜಿ ಕೇಳಿದರು. ಕಲ್ಯಾಣಾನಂದರು ಮುಂದೆ ಬಂದು, "ಇದೋ, ನಾನೇ ಇಲ್ಲಿದ್ದೇನೆ. ನನ್ನನ್ನೇ ನಿಮಗೆ ಅರ್ಪಿಸುತ್ತೇನೆ. ನಾನು ನಿಮ್ಮ ಸೇವಕ. ನನಗೆ ಆಜ್ಞೆ ಕೊಡಿರಿ. ನಾನು ಯಾವ ಕೆಲಸವನ್ನಾದರೂ ಮಾಡುತ್ತೇನೆ." ಸ್ವಾಮೀಜಿ ಹೇಳಿದರು, "ನನಗೆ ಬೇಕಾದುದು ಅದೇ. ಹರಿದ್ವಾರಕ್ಕೆ ಹೋಗು. ನಿನಗೆ ಸ್ವಲ್ಪ ಹಣ ಕೊಡುತ್ತೇನೆ. ಒಂದು ಭೂಮಿಯನ್ನು ಕೊಂಡುಕೊ. ಅಲ್ಲಿನ ಗಿಡಗಂಟೆಗಳನ್ನೆಲ್ಲ ಕತ್ತರಿಸು. ಕೆಲವು ಗುಡಿಸಿಲುಗಳನ್ನು ಕಟ್ಟು. ಅಲ್ಲಿ ಸಾಧು ಸೇವೆ ಮಾಡು. ನಾನು ಅಲ್ಲಿ ಕಾಯಿಲೆ ಬಿದ್ದಾಗ ನೂರು ಮೈಲಿ ದೂರದ ಮೀರತ್‌ಗೆ ಹೋಗಿ ಚಿಕಿತ್ಸೆ ಪಡೆದೆ. ಹರಿದ್ವಾರದಲ್ಲಿ ಆಸ್ಪತ್ರೆ ಇಲ್ಲ. ಎಲ್ಲರಿಗೂ ಮೀರತ್‌ಗೆ ಹೋಗುವುದು ಸಾಧ್ಯವಿಲ್ಲ. ಅನೇಕ ಯಾತ್ರಿಗಳು ಹರಿದ್ವಾರಕ್ಕೆ ಹೋಗಿ ಕಾಯಿಲೆಯಿಂದ ಸಾಯುತ್ತಾರೆ. ರಸ್ತೆಯ ಬದಿಯಲ್ಲಿ ಯಾರಾದರೂ ನರಳುತ್ತ ಬಿದ್ದಿದ್ದರೆ ಅವರನ್ನೆತ್ತಿಕೊಂಡು ಬಂದು ನಿನ್ನ ಗುಡಿಸಿಲಿನಲ್ಲಿ ಅವರಿಗೆ ಚಿಕಿತ್ಸೆ ಮಾಡು. ಬಂಗಾಳವನ್ನು ಮರೆತುಬಿಡು! ಹಿಂತಿರುಗಬೇಡ. ಹೋಗು!"

ಈ ಶಿಷ್ಯ ಹಾಗೆಯೇ ಮಾಡಿದ. ಹರಿದ್ವಾರಕ್ಕೆ ಹೋಗಿ ಆಸ್ಪತ್ರೆ ಕಟ್ಟಿ ರೋಗಿಗಳ ಸೇವೆ ಮಾಡಿದ. ಆಮೇಲೆ ಬಂಗಾಳಕ್ಕೆ ಹಿಂದಿರುಗಲೇ ಇಲ್ಲ. ಮಠದ ಅಧ್ಯಕ್ಷರೇ ಕರೆದರೂ ಕಲ್ಕತ್ತೆಗೆ ಹೋಗಲಿಲ್ಲ. ಆಗ ಮಾಯಾವತಿಯಲ್ಲಿದ್ದ ಸ್ವಾಮಿ ಸ್ವರೂಪಾನಂದ ಎಂಬ ವಿವೇಕಾನಂದರ ಮತ್ತೋರ್ವ ಶಿಷ್ಯರೂ ಕಲ್ಯಾಣಾನಂದರಿಗೆ ಸ್ವಲ್ಪ ಹಣ ಕಳುಹಿಸಿದರು, ಅವರಲ್ಲಿಗೆ ಭೇಟಿ ಕೊಟ್ಟರು. ಪ್ರಬುದ್ಧಭಾರತ ಪತ್ರಿಕೆಯಲ್ಲಿ ಇವರ ಸೇವೆಯ ಪ್ರಚಾರ ಮಾಡಿದರು.

ಹರಿದ್ವಾರದಲ್ಲಿ ಕಲ್ಯಾಣಾನಂದರಿಗೆ ಬೇಕಾದಷ್ಟು ಭೂಮಿ ಸಿಗಲಿಲ್ಲ. ಆದರೆ ಹರಿದ್ವಾರ ಮತ್ತು ಕನಖಲ್ ನಡುವೆ ಗಂಗಾ ನಾಲೆಯ ದಡದಲ್ಲಿ ಬೇಕಾದಷ್ಟು ಕಾಡು ಭೂಮಿ ಇತ್ತು. ಕಲ್ಯಾಣಾನಂದರು ಮೂವತ್ತು ಎಕರೆ ಪ್ರದೇಶ ಕೊಂಡುಕೊಂಡು ಕಾಡು ಕಡಿದು ಗುಡಿಸಿಲುಗಳನ್ನು ಕಟ್ಟಿದರು. ಆ ಸಮಯದಲ್ಲಿ ಶ್ರೀರಾಮಕೃಷ್ಣರ ಶಿಷ್ಯ ನಿರಂಜನಾನಂದರು ಅಲ್ಲಿಗೆ ಬಂದರು. ಅವರು ಮಹಾ ಶಕ್ತಿಶಾಲಿ. ದೊಡ್ಡ ತೊಲೆಯನ್ನು ಅವರು ಒಬ್ಬರೇ ಎತ್ತಿಬಿಡುತ್ತಿದ್ದರು. ಕಟ್ಟಡದ ಕೆಲಸಕ್ಕೆ ಅವರೂ ಕೈಹಾಕಿದರು. ಆಗಾಗ ಬಂದು ಹೋಗುತ್ತಿದ್ದರು.

೧೯೦೪ರಲ್ಲಿ ಸ್ವಾಮಿ ವಿವೇಕಾನಂದರ ಇನ್ನೊಬ್ಬ ಶಿಷ್ಯ ನಿಶ್ಚಯಾನಂದರೂ ಕನಖಲ್ ಸೇವಾಶ್ರಮಕ್ಕೆ ಬಂದರು. ಆಗಿನಿಂದ ಈ ಇಬ್ಬರು ಸ್ವಾಮಿಗಳೂ ಅಲ್ಲಿ ಅಶ್ವಿನೀ ದೇವತೆಗಳ ಹಾಗೆ ಕೆಲಸ ಮಾಡಿದರು. ಈ ಸ್ವಾಮಿಗಳೇ ಆಸ್ಪತ್ರೆಯ ಎಲ್ಲ ಕೆಲಸಗಳನ್ನೂ ಮಾಡಿದರು—ರೋಗಿಗಳನ್ನು ಸ್ವಚ್ಛ ಮಾಡುವುದು, ಮಲಮೂತ್ರಗಳನ್ನೆಲ್ಲ ದೂರಕ್ಕೆ ಸಾಗಿಸುವುದು ಇತ್ಯಾದಿ. ಯಾವ ಕೆಲಸವನ್ನೂ ಅವರು ಹೀನವೆಂದು ತಿಳಿಯಲಿಲ್ಲ. ನಿರಂಜನಾನಂದರ ಮರಣದ ನಂತರ ಬಂದ ನಿಶ್ಚಯಾನಂದರು ಕಲ್ಯಾಣಾನಂದರಿಗೆ ಬಲವಾದ ಆಸರೆಯಾದರು. ಶ್ರೀರಾಮಕೃಷ್ಣರ ಶಿಷ್ಯರಾದ ಸ್ವಾಮಿ ಬ್ರಹ್ಮಾನಂದರೂ, ಸ್ವಾಮಿ ತುರೀಯಾನಂದರೂ ಕನಖಲ್ ಸೇವಾಶ್ರಮಕ್ಕೆ ಭೇಟಿಕೊಟ್ಟು, ಸೇವಾಶ್ರಮದ ನಿಷ್ಠೆಯ ಕಾರ್ಯವನ್ನು ಆಶೀರ್ವದಿಸಿದರು, ಉತ್ತೇಜಿಸಿದರು.

ಹರಿದ್ವಾರದ ಇತರ ಸಂನ್ಯಾಸಿಗಳಿಗೆ ಈ ಇಬ್ಬರು ಸ್ವಾಮಿಗಳನ್ನು ಕಂಡರೆ ತಾತ್ಸಾರ. ಕೊಳಕಿನ ಪರಿಷ್ಕಾರದಂತಹ ಕೆಲಸಗಳನ್ನೂ ಮಾಡುತ್ತಿದ್ದ ಇವರನ್ನು ಭಂಗೀ(ಅಸ್ಪೃಶ್ಯ)ಸಾಧುಗಳು ಎಂದು ಕರೆದು ಹೀಯಾಳಿಸುತ್ತಿದ್ದರು. ಇವರನ್ನು ಯಾವ ಸಭೆ,

ಸಮಾರಂಭ, ಭಂಡಾರ (ಭೋಜನ ಸಮಾರಾಧನೆ)ಗಳಿಗೆ ಕರೆಯುತ್ತಿರಲಿಲ್ಲ. ಮೊದಲು ಎರಡು ಮೂರು ಗುಡಿಸಿಲುಗಳು ಇದ್ದದ್ದು ಸಾಲದೆ ಒಂದೊಂದಾಗಿ ಹೊಸ ಗುಡಿಸಿಲುಗಳನ್ನು ಕಲ್ಯಾಣ್-ನಿಶ್ಚಯ್ ಮಹಾರಾಜರು ಕಟ್ಟಿಸಿದರು. ಹೆಚ್ಚಿನ ಸಂಖ್ಯೆಯ ರೋಗಿಗಳ ಆರೈಕೆ ಮಾಡುವುದು ಸಾಧ್ಯ ಆಯಿತು. ಖೇದದ ವಿಷಯವೇನೆಂದರೆ ಇಲ್ಲಿ ಗಂಡಸರಿಗೆ ಮಾತ್ರ ಪ್ರವೇಶ ಇದ್ದಿತು. ಸ್ವಾಮಿಗಳೇ ದಾದಿಯರ 'ತೊತ್ತು ಕೆಲಸ' ಮಾಡುತ್ತಿದ್ದುದರಿಂದ ಅಲ್ಲಿ ಹೆಂಗಸರನ್ನು ಸೇರಿಸಿಕೊಳ್ಳುತ್ತಿರಲಿಲ್ಲ.

ಆಗ ಶಂಕರಾಚಾರ್ಯರ ಪರಂಪರೆಯವರಾದ, ಕೈಲಾಸಾಶ್ರಮದ ಮಹಂತರಾಗಿದ್ದ ಮತ್ತು ದಶನಾಮೀ ಪಂಥಗಳ ಸ್ವಾಮಿಗಳಿಗೆಲ್ಲಾ ಮುಖಂಡರಾದ ಧನರಾಜ ಗಿರಿ ಅವರು ಕನಖಲ್‌ಗೆ ಬಂದರು. ಅವರನ್ನು ಗೌರವಿಸಲು ಒಂದು ಭಂಡಾರವನ್ನು ಏರ್ಪಡಿಸಿದರು. ಆಗ ಧನರಾಜಗಿರಿ ಹೇಳಿದರು, "ಸ್ವಾಮಿ ವಿವೇಕಾನಂದರ ಶಿಷ್ಯರು ಕನಖಲ್‌ನಲ್ಲಿದ್ದಾರೆ ಎಂದು ಕೇಳಿದ್ದೇನೆ. ನಿಮಗೆ ಅವರ ಪರಿಚಯ ಇಲ್ಲವೆ?"

"ನಮಗೆ ಅವರು ಗೊತ್ತು. ಆದರೆ ಅವರು ಭಂಗೀ ಸಾಧುಗಳು, ಅವರು ಮೈಲಿಗೆಯ ಕೆಲಸ ಎಲ್ಲಾ ಮಾಡುತ್ತಾರೆ."

"ನಿಮಗೆ ಖಾಯಿಲೆ ಆದಾಗ ನೀವು ಚಿಕಿತ್ಸೆಗಾಗಿ ಅವರ ಹತ್ತಿರವೇ ಹೋಗುವಿರಿ, ಅಲ್ಲವೇ? ಇಲ್ಲಿ ಬೇರೆ ಯಾವ ಆಸ್ಪತ್ರೆಯೂ ಇಲ್ಲ ಅಲ್ಲವೆ?"

"ಹೌದು."

"ಅವರ ಸೇವೆಯನ್ನು ಪಡೆಯುತ್ತೀರಿ, ಆದರೆ ಅವರನ್ನು ಭಂಗಿಗಳು ಎಂದು ಹಂಗಿಸುತ್ತೀರಿ! ಅವರನ್ನೂ ಭಂಡಾರಕ್ಕೆ ಆಹ್ವಾನಿಸಿ ಕರೆದು ತನ್ನಿ!"

ಮುಖ್ಯ ಮಹಂತರ ಆಜ್ಞೆಗೆ ಎದುರು ಆಡುವ ಹಾಗಿಲ್ಲ. ಸೇವಾಶ್ರಮಕ್ಕೆ ಹೋಗಿ ಇಬ್ಬರು ಸ್ವಾಮಿಗಳನ್ನೂ ಭಂಡಾರಕ್ಕೆ ಕರೆದರು. ಕಲ್ಯಾಣಾನಂದರು ಮೃದುಸ್ವಭಾವದವರು. ಅವರು ಭಂಡಾರಕ್ಕೆ ಹೋಗುತ್ತಿದ್ದರೇನೋ. ಆದರೆ ನಿಶ್ಚಯಾನಂದರು ಮಿಲಿಟರಿಯಲ್ಲಿದ್ದವರು. ಅವರು ಖಂಡಿತವಾಗಿ ಭಂಡಾರಕ್ಕೆ ಬರುವುದಿಲ್ಲ ಎಂದುಬಿಟ್ಟರು. ಕರೆಯಲು ಬಂದಿದ್ದ ಸಂನ್ಯಾಸಿ "ಅವರು ಬರಲು ಒಪ್ಪಲಿಲ್ಲ" ಎಂದು ಧನರಾಜ ಗಿರಿ ಅವರಿಗೆ ವರದಿ ಮಾಡಿದರು.

ಆಗ ಧನರಾಜ ಗಿರಿ ಅವರು ತಮ್ಮ ಕಾರ್ಯದರ್ಶಿ ಸಂನ್ಯಾಸಿಯನ್ನೇ ಕಳುಹಿಸಿದರು. ಅವರು ಸೇವಾಶ್ರಮಕ್ಕೆ ಬಂದು, ಕೈಲಾಸಾಶ್ರಮದ ಮಹಂತರೇ ಹೇಳಿ ಕಳುಹಿಸಿದ್ದಾರೆಂದೂ, ನೀವು ಬರದಿದ್ದರೆ ಭಂಡಾರದ ಭೋಜನ ಆರಂಭವಾಗುವುದಿಲ್ಲವೆಂದೂ, ನೂರಾರು ಸಾಧುಗಳು ನಿಮಗಾಗಿ ಕಾದಿದ್ದಾರೆ, ದಯಮಾಡಿ ಬನ್ನಿ ಎಂದೂ ಬೇಡಿಕೊಂಡರು. ಅವರೂ ಒಬ್ಬ ಪ್ರಸಿದ್ಧರಾದ ಸ್ವಾಮಿಗಳೇ.

ಆಗಲೂ ನಿಶ್ಚಯಾನಂದರು ಬರುವುದಿಲ್ಲ ಎಂದರು. ಆದರೆ ಕಲ್ಯಾಣಾನಂದರು ಅವರನ್ನು ಒಪ್ಪಿಸಿದರು. "ನಾವು ಧನರಾಜ ಗಿರಿಯವರಿಗಾಗಿಯಾದರೂ ಹೋಗಲೇಬೇಕು. ಅವರು ಮಹಾತ್ಮರು. ಸ್ವಯಂ ಸ್ವಾಮಿ ವಿವೇಕಾನಂದರೇ ಅವರ ಹತ್ತಿರ ಶಾಸ್ತ್ರಗಳ ವಿಚಾರವಾಗಿ ಮಾತನಾಡಿದ್ದರು. ಅವರ ಮಾತನ್ನು ನಾವು ಮೀರಬಾರದು" ಎಂದು ಹೇಳಿದರು. ಆಗಲೇ ಮಧ್ಯಾಹ್ನ ಎರಡು ಗಂಟೆ ಆಗಿದ್ದಿತು. ಆದರೆ ಎಲ್ಲರೂ ಈ ಸಾಧುಗಳು ಬರುವುದನ್ನೇ ಕಾದಿದ್ದರು.

ಧನರಾಜ ಗಿರಿ ಅವರು ದ್ವಾರದಲ್ಲಿಯೇ ನಿಂತು ಇವರನ್ನು ಅತ್ಯಂತ ಗೌರವದಿಂದ ಸ್ವಾಗತಿಸಿದರು. ಅವರಿಗೆ ಪ್ರಣಾಮ ಮಾಡಿದರು. ಭೋಜನದ ಸಮಯದಲ್ಲಿ ತಮ್ಮ ಎರಡು ಪಕ್ಕಗಳಲ್ಲಿ ಸ್ವಾಮಿ ಕಲ್ಯಾಣಾನಂದರನ್ನೂ ಸ್ವಾಮಿ ನಿಶ್ಚಯಾನಂದರನ್ನೂ ಕುಳ್ಳಿರಿಸಿಕೊಂಡು ಉಪಚಾರ ಮಾಡಿದರು. ಇದನ್ನು ಕಂಡು ಇತರ ದಶನಾಮೀ ಸಾಧುಗಳಿಗೆ ಆಶ್ಚರ್ಯವಾಯಿತು. ಆಗ ಅವರ ಕಣ್ಣು ತೆರೆಯಿತು.

ಆಗ ಧನರಾಜ ಗಿರಿ ಹೇಳಿದರು: "ನೀವೆಲ್ಲಾ ಮಹಾನ್ ಸಾಧುಗಳು ಎಂದು ತಿಳಿದುಕೊಂಡಿದ್ದೀರಿ. ಆದರೆ ಇಲ್ಲಿ ನಿಜವಾದ ಸಾಧುಗಳು ಯಾರಾದರೂ ಇದ್ದರೆ ಅದು ಅವರಿಬ್ಬರೇ. ಅವರು ಪರಿಶುದ್ಧ ಜೀವನ ನಡೆಸುತ್ತಾರೆ, ಸ್ವಾಮಿ ವಿವೇಕಾನಂದರ ಆದರ್ಶದಂತೆ ಬಡಜನರ ಸೇವೆ ಮಾಡುತ್ತಾರೆ. ಇಂದಿನ ಕಾಲಕ್ಕೆ ಇದೇ ಸರಿಯಾದ ಆದರ್ಶ. ನೀವು ಕಾಯಿಲೆ ಬಿದ್ದರೆ ಇವರು ನಿಮ್ಮ ಸೇವೆ ಮಾಡುತ್ತಾರೆ. ಆಮೇಲೆ ನೀವು ಅವರನ್ನು 'ಭಂಗೀ ಸಾಧುಗಳು' ಎಂದು ಹೀಯಾಳಿಸುತ್ತೀರಿ! ನಿಮಗೆ ನಾಚಿಕೆ ಆಗುವುದಿಲ್ಲವೆ? ನೀವು ಮಕ್ಕಳಾಗಿದ್ದಾಗ ನಿಮ್ಮ ಮಲಮೂತ್ರಗಳನ್ನು ಎತ್ತಿ ಶುದ್ಧಿಮಾಡಿದವರು ಯಾರು? ನಿಮ್ಮ ತಾಯಿ ಮಾಡಿದಳು. ಅವಳನ್ನು ನೀವು ಭಂಗಿ ಹೆಂಗಸು ಎನ್ನುತ್ತೀರಾ?"

ಹೀಗೆ ಆ ಮಹಾತ್ಮರು ಹರಿದ್ವಾರದ ಸಂನ್ಯಾಸಿಗಳನ್ನು ತರಾಟೆಗೆ ತೆಗೆದುಕೊಂಡರು. ಕಲ್ಯಾಣ್ ಮಹಾರಾಜ್ ಮತ್ತು ನಿಶ್ಚಯ್ ಮಹಾರಾಜರಿಗೆ "ಇವರು ಮಾಡಿದ ಅಪಚಾರಗಳಿಗಾಗಿ ನನ್ನನ್ನು ಕ್ಷಮಿಸಿರಿ!" ಎಂದು ತಾವೇ ಕ್ಷಮಾಯಾಚನೆ ಮಾಡಿದರು! ಈ ಇಬ್ಬರು ಸಾಧುಗಳೂ "ಮಹಾರಾಜ್, ನೀವು ಹೀಗೆ ಹೇಳಬಾರದು. ಈ ಜನರು ಏನಾದರೂ ಹೇಳಿರಲಿ. ಅದನ್ನೆಲ್ಲಾ ನಾವು ಮನಸ್ಸಿಗೆ ತೆಗೆದುಕೊಳ್ಳಲಿಲ್ಲ!"

ಅಂದಿನಿಂದ ಹರಿದ್ವಾರ-ಕನಖಲ್ ಆಶ್ರಮಗಳ ಸಾಧುಗಳೆಲ್ಲ ಸೇವಾಶ್ರಮದ ಸಾಧುಗಳಿಗೆ ಗೌರವ ಕೊಡಲಾರಂಭಿಸಿದರು. ಅವರನ್ನು ತಮ್ಮ ಉತ್ಸವ-ಭಂಡಾರಗಳಿಗೆ ಆಹ್ವಾನಿಸಿದರು. ಕಲ್ಯಾಣ ಮಹಾರಾಜರು ಅವರಲ್ಲಿಗೆ ಹೋಗಿ ಬರುತ್ತಿದ್ದರು. ಆನಂತರ ಸ್ಥಳೀಯ ಸ್ವಾಮಿಗಳು ಸೇವಾಶ್ರಮದ ಕೆಲಸಕ್ಕೆ ಸಹಾಯ ಮಾಡಲಾರಂಭಿಸಿದರು. ೧೯೬೩ರಲ್ಲಿ ಸೇವಾಶ್ರಮದಲ್ಲಿ ಸ್ವಾಮಿ ವಿವೇಕಾನಂದರ ಅಮೃತಶಿಲೆಯ ವಿಗ್ರಹ ಸ್ಥಾಪಿಸಲು ಸ್ವಲ್ಪ ಧನ ಸಂಚಯ ಮಾಡಿಕೊಟ್ಟರು.

**ಹೀಗೆ ತೊತ್ತು ಕೆಲಸ ತನ್ನ ಪ್ರಭಾವ ಬೀರಿತು !**